**2ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 3386/2024**

**ಪಿರ್ಯಾದುದಾರರು :** **ವಿರುದ್ಧ** **ಆರೋಪಿ:**

| ಪಿರ್ಯಾದುದಾರರು | ಆರೋಪಿ |
|---|---|
| ಸಂತೆಬೆನ್ನೂರು ಪೊಲೀಸ್ ಠಾಣೆ | 1. ನಾಗರಾಜ ಬಿನ್ ಹಾಲಪ್ಪ, ವಯಸ್ಸುಃ 35 ವರ್ಷ,<br>2. ಹಾಲಪ್ಪ ಬಿನ್ ಸಿದ್ದಪ್ಪ, ವಯಸ್ಸು 68 ವರ್ಷ,<br>3. ಹಾಲಮ್ಮ ಕೋಂ ಹಾಲಪ್ಪ, ವಯಸ್ಸು 64 ವರ್ಷ<br>4. ನಾಗರಾಜ ಬಿನ್ ಹಾಲಪ್ಪ, ವಯಸ್ಸು 32 ವರ್ಷ<br>ಎಲ್ಲರ ವಾಸಃ ಕುಳೇನೂರು ಗ್ರಾಮ, ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ |

**<u>ದೋಷಾರೋಪಣೆ</u>**

ನಾನು ಶ್ರೀಮತಿ ಮಹಾಲಕ್ಷ್ಮೀ ಜಿ 2ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಒಂದನೇಯದಾಗಿ ಚಾಸಾ-1ರವರನ್ನು 1 ನೇ ಅರೋಪಿಯೊಂದಿಗೆ 2ವರ್ಷದ ಹಿಂದೆ ಮದುವೆ ಮಾಡಿಕೊಟಿಟದ್ದು ಮದುವೆಯ ಕೆಲ ದಿನಗಳ ನಂತರ 1 ರಿಂದ 4 ನೇ ಆರೋಪಿತರು ಸೇರಿಕೊಂಡು ನೀನು ನೋಡಲು ಚೆನ್ನಾಗಿಲ್ಲ. ನಿನಗೆ ಅಡಿಗೆ ಮಾಡಲು ಬರುವುದಿಲ್ಲ ಕೆಲಸ ಬರುವುದಿಲ್ಲ, ನಾವೂ ಇನ್ನೂ ಒಳ್ಳೆಯ ಸಂಬಂಧದಲ್ಲಿ ಹೆಣ್ಣು ತರಬಹುದಿತ್ತು ಎಂದು ಸಣ್ಣಪುಟ್ಟ ವಿಚಾರದಲ್ಲಿ ಮಾನಸಿಕವಾಗಿ ಹಿಂಸೆ ನೀಡಿ ಅಗಾಗ ಹೊಡಿಬಡಿ ಮಾಡಿ ದೈಹಿಕವಾಗಿ ಹಿಂಸೆ ಕಿರುಕುಳ ಕೊಡುವುದರ ಮೂಲಕ ಭಾ.ದಂ.ಸಂ.ಕಲಂ 498(ಎ) ಸಹ ವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದಂತೆ ಆರೋಪಿತರಾದ ನೀವು ದಿಃ 04-04-2014 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಸೇರಿಕೊಂಡು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಬಟ್ಟೆ ಬರೆ ಹೊರೆಗ ಎಸೆದು ತಾಳಿ ಕಾಲುಂಗುರ ಬಲವಂತವಾಗಿ ಕಿತ್ತುಕೊಂಡು ಮನೆಯಿಂದ ಹೊರದಬ್ಬಿರುತ್ತೀರಿ ಆ ಮೂಲಕ ಭಾ.ದಂ.ಸಂ.ಕಲಂ 504 ಸಹ ವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ  ಚಾಸಾ-1 ರವರನ್ನು  ಮನೆಯಿಂದ ಹೊರದಬ್ಬಿದ ವಿಚಾರ ತಿಳಿದು ಚಾಸಾ-5 ರವರು ಕೂಳೆನೂರಿನಿಂದ ಚಾಸಾ-1 ರವರನ್ನು ತವರು ಮನೆಗೆಕರೆದುಕೊಂಡು ಹೋಗಲು ಬಂದಾಗ ಚಾಸಾ-1 ರವರ ಮೇಲೆ ಹಲ್ಲೆ ಮಾಡಿ      ಜೀವ ಬೆದರಿಕೆ ಹಾಕುವ ಮೂಲಕ ಭಾ.ದಂ.ಸಂ.ಕಲಂ 506 ಸಹ ವಾಚಕ ಕಲಂ 34 ರ  ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೆಯದಾಗಿ ಚಾಸಾ-1 ರವರನ್ನು  ಮನೆಯಿಂದ ಹೊರದಬ್ಬಿದ ವಿಚಾರ ತಿಳಿದು ಚಾಸಾ-5 ರವರು ಕೂಳೆನೂರಿನಿಂದ ಚಾಸಾ-1 ರವರನ್ನು ತವರು ಮನೆಗೆ ಕರೆದುಕೊಂಡು ಹೋಗಲು ಬಂದಾಗ ಚಾಸಾ-1 ರವರಿಗೆ ಅಡ್ಡಗಟ್ಟಿ ಮತ್ತೊಮ್ಮೆ ಅವರ ಮೇಲೆ ಹಲ್ಲೆ ಮಾಡಿರುದರ ಮೂಲಕ ಭಾ.ದಂ.ಸಂ.ಕಲಂ 341 ಸಹ ವಾಚಕ ಕಲಂ 34 ರ  ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

ದಿನಾಂಕ: 15-01-2025

**2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಗಿರಿ.**

**2ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 3386/2024**

**1. ಕರ್ನಾಟಕ ಸರ್ಕಾರ (ಸಂತೆಬೆನ್ನೂರು ಪಿ.ಎಸ್ )**

**ವಿರುದ್ಧ**

2. ನಾಗರಾಜ ಬಿನ್ ಸಿದ್ದಪ್ಪ, ವಯಸ್ಸು 35 ವರ್ಷ,
ವಾಸಃ ಕುಳೇನೂರು ಗ್ರಾಮ, ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 15-01-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ**
**ದಿನಾಂಕಃ 15-01--2025**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನಗಿರಿ.**